
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

**15-02-2026 ಫಾಲ್ಗುಣ ಮಾಸ : ಕೃಷ್ಣ ಪಕ್ಷ ಭಾನುವಾರ**

ಪುಟ : ೪ ಸಂಪುಟ : ೭೨ ಸಂಚಿಕೆ : ೦೨

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀಕ್ಷೇತ್ರ ಹೊಂಬುಜ**

### ಶುಭಾಶೀರ್ವಚನ

## "ಜೀವನದ ನಿಜವಾದ ಉದ್ದೇಶ – ಆತ್ಮಾನಂದ"

ಈ ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲೂ ಒಂದು ಪ್ರಶ್ನೆ ಸದಾ ಮೂಡುತ್ತದೆ ನಾನು ಯಾಕೆ ಬದುಕುತ್ತಿದ್ದೇನೆ? ಜೀವನದ ಗುರಿ ಏನು? ಧನ, ಸ್ಥಾನ, ಯಶಸ್ಸು, ಕುಟುಂಬ ಇವೆಲ್ಲವೂ ಇದ್ದರೂ ಮನಸ್ಸಿಗೆ ಶಾಂತಿ ಸಿಗದಿದ್ದರೆ ಜೀವನ ಅಪೂರ್ಣವೆಂದು ಅನಿಸುತ್ತದೆ. ಆತ್ಮತತ್ತ್ವವನ್ನು ಅರಿಯದೇ ಜೀವನದ ನಿಜಾರ್ಥ ತಿಳಿಯದು.

ಬೆಳಗಿನ ಸುಂದರ ಸಮಯ. ಪೂರ್ವ ದಿಕ್ಕಿನಲ್ಲಿ ಸೂರ್ಯ ಕಿರಣಗಳು ಹರಡಿಕೊಂಡಿದ್ದವು. ಹಕ್ಕಿಗಳು ಗೂಡನ್ನು ಬಿಟ್ಟು ತಮ್ಮ ದಿನಚರಿಯನ್ನು ಆರಂಭಿಸಿದ್ದವು. ಪ್ರಕೃತಿಯ ಮೃದುವಾದ ಗಾಳಿ ಮನಸ್ಸಿಗೆ ಆನಂದವನ್ನು ನೀಡುತ್ತಿತ್ತು. ಆ ಸಮಯದಲ್ಲಿ ಆಶ್ರಮದಲ್ಲಿ ಆಚಾರ್ಯ ಆನಂದರು ಶಿಷ್ಯರಿಗೆ ಜೀವನ ವಿದ್ಯೆಯನ್ನು ಬೋಧಿಸುತ್ತಿದ್ದರು. ಎಲ್ಲ ಶಿಷ್ಯರೂ ಗಮನದಿಂದ ಕೇಳುತ್ತಿದ್ದರು. ಆಗ ಮುಕುಲ ಎಂಬ ಶಿಷ್ಯನು ಎದ್ದು ಕೇಳಿದನು "ಆಚಾರ್ಯರೇ ಜೀವನವೆಂದರೆ ಏನು? ಜೀವನದ ಉದ್ದೇಶವೇನು? ಮರಣವೇ ಅದರ ಅಂತ್ಯವೇ?"

ಆಚಾರ್ಯರು ಕ್ಷಣಕಾಲ ಮೌನದಿಂದ ನಿಂತು ಹೇಳಿದರು. ವತ್ಸ, ಮಧ್ಯಾಹ್ನದಲ್ಲಿ ಉತ್ತರ ಕೊಡುತ್ತೇನೆ. ಮಧ್ಯಾಹ್ನ ಅವರು ವಿವರಿಸಿದರು. ಈ ಜಗತ್ತಿನಲ್ಲಿರುವ ಪ್ರತಿಯೊಂದು ಜೀವಿಯಲ್ಲೂ ಚೈತನ್ಯವಿದೆ. ಆ ಚೈತನ್ಯವೇ ಆತ್ಮ. ಆತ್ಮ ಇದ್ದರೆ ಜೀವನ ಇದೆ. ಆತ್ಮ ಇಲ್ಲದಿದ್ದರೆ ಜೀವನವಿಲ್ಲ.

WWW.HOMBUJAPADMAVATI.ORG

ಮುಕುಲ ಮತ್ತೆ ಕೇಳಿದನು. ಆದರೆ ಜೀವನದ ಉದ್ದೇಶ ಆಚಾರ್ಯರು ಹೇಳಿದರು. ಆನಂದವೇ ಜೀವನದ ಉದ್ದೇಶ. "ಆತ್ಮ ಸ್ವಭಾವತಃ ಆನಂದಸ್ವರೂಪ." ಆದರೂ ಮುಕುಲನಿಗೆ ಸಂಪೂರ್ಣವಾಗಿ ಅರ್ಥವಾಗಲಿಲ್ಲ. ಸಂಜೆ ಆಚಾರ್ಯರು ಅವನನ್ನು ಮತ್ತು ಇತರ ಬ್ರಹ್ಮಚಾರಿಗಳನ್ನು ನದಿ ತೀರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಅಂಬಿಗನನ್ನು ಕೇಳಿಸಿದರು. ನೀನು ದೋಣಿ ಏಕೆ ಓಡಿಸುತ್ತೀಯ. ಅವನು ಉತ್ತರಿಸಿ ನನ್ನ ಕುಟುಂಬದ ಸಂತೋಷಕ್ಕಾಗಿ ಎಂದನು. ನಂತರ ಒಬ್ಬ ಮೀನುಗಾರನನ್ನು ಕೇಳಿದರು ನೀನು ಮೀನು ಏಕೆ ಹಿಡಿಯುತ್ತೀಯ ಎಂದು.

ಅವನು ಹೇಳಿದ ನನ್ನವರ ಅಗತ್ಯಗಳನ್ನು ಪೂರೈಸಿ ಅವರಿಗೆ ಸಂತೋಷ ಕೊಡಲು ಎಂದನು. ಸಂಜೆ ಆಶ್ರಮಕ್ಕೆ ಮರಳಿದ ನಂತರ ಮುಕುಲ ಮತ್ತೆ ಕೇಳಿದನು ಆಚಾರ್ಯರೇ ಈಗ ನನ್ನ ಪ್ರಶ್ನೆಗೆ ಉತ್ತರ, ಆಚಾರ್ಯರು ಮೃದುವಾಗಿ ನಗುತು ಹೇಳಿದರು "ಶಿಷ್ಯರೇ, ನಿನಗೆ ಉತ್ತರ ಸಿಕ್ಕಿದೆ. ಎಲ್ಲರೂ ತಮ್ಮ ಕೆಲಸವನ್ನು ಕೊನೆಗೆ ಸಂತೋಷಕ್ಕಾಗಿ ಮಾಡುತ್ತಾರೆ. ಯಾರಿಗೂ ದುಃಖ ಬೇಡ. ಆತ್ಮದ ಸ್ವಭಾವವೇ ಆನಂದ. ಆದ್ದರಿಂದ ಆನಂದದಿಂದ ಬದುಕುವುದು ಮತ್ತು ಇತರರಿಗೂ ಆನಂದ ನೀಡುವುದು ಜೀವನದ ನಿಜವಾದ ಉದ್ದೇಶ" ಆ ಕ್ಷಣದಲ್ಲಿ ಮುಕುಲನ ಮನಸ್ಸಿನಲ್ಲಿ ಜ್ಞಾನೋದಯವಾಯಿತು.

ಕಥೆಯ ಸಾರಾಂಶವಿಷ್ಟೆ, ದುಃಖ, ಅಭಾವ ಮತ್ತು ಅಶಕ್ತಿಯಿಂದ ಮುಕ್ತವಾಗಿ, ಸುಖ–ಶಾಂತಿ–ಆನಂದದಿಂದ ಬದುಕುವುದು ಜೀವನದ ಗುರಿ. ಸ್ವಂತ ಸಂತೋಷ ಮಾತ್ರವಲ್ಲ, ಪರರ ಹಿತದಲ್ಲಿಯೂ ಸಂತೋಷ ಕಂಡುಕೊಳ್ಳುವುದು ಜೀವನದ ಮಹತ್ವ.

ಸಂತೋಷಃ ಪರಮ ಸುಖಂ । ಸಂತೋಷಃ ಪರಮ ಧನಂ ।
ಸಂತೋಷಃ ಪರಮ ಲಾಭಂ । ಸಂತೋಷತ್ ನ ಪರಂ ಸುಖಂ

ಸಂತೋಷವೇ ಪರಮ ಸುಖ. ಸಂತೋಷಕ್ಕಿಂತ ದೊಡ್ಡ ಧನವಿಲ್ಲ.

ಶುಭವಾಗಲಿ

## ಶ್ರೀಕ್ಷೇತ್ರ ಹೊಂಬುಜದಲ್ಲಿ 'ಶ್ರೀ ಜಿನಸಹಸ್ರಾಷ್ಟನಾಮಾರ್ಚನೆ'

### "ಜಿನಸಹಸ್ರನಾಮ ಅರ್ಚನೆಯಿಂದ ಆತ್ಮೋನ್ನತಿಯ ಸನ್ಮಾರ್ಗ ಲಾಭ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ







**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಶ್ರೀ 1008 ಪಾರ್ಶ್ವನಾಥ ತೀರ್ಥಂಕರ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಆದಿನಾಥ ತೀರ್ಥಂಕರ, ಶ್ರೀ ಮಹಾವೀರ ತೀರ್ಥಂಕರ ಸನ್ನಿಧಿಯಲ್ಲಿ ಶ್ರಾವಕ–ಶ್ರಾವಿಕೆಯರು 'ವಿಶ್ವಶಾಂತಿ ಯುವಸೇವಾ ಸಮಿತಿ' ಆಯೋಜಿಸಿದ ಜಿನಸಹಸ್ರನಾಮಾರ್ಚನೆಯ ಪೂಜಾ ವಿಧಿ–ವಿಧಾನದಲ್ಲಿ ಪಾಲ್ಗೊಂಡರು.

ಆಚಾರ್ಯ ಶ್ರೀ 108 ಅನೇಕಾಂತಸಾಗರ ಮಹಾರಾಜರ ಸಂಘಸ್ಥ ಮುನಿಶ್ರೀಗಳವರ, ಆರ್ಯಿಕೆಯರ ದಿವ್ಯ ಸಾನಿಧ್ಯ ಹಾಗೂ ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ನೇತೃತ್ವ, ಮಾರ್ಗದರ್ಶನದಲ್ಲಿ ಶ್ರದ್ಧಾಭಕ್ತಿಯಿಂದ ಹೊಂಬುಜ ಶ್ರೀಮಠದ ಶ್ರೀ ಜಿನದತ್ತರಾಯ ಸಭಾಭವನದಲ್ಲಿ ಜಿನಾಗಮೋಕ್ತ ಶಾಸ್ತ್ರದನ್ವಯ ನೆರವೇರಿತು.

ಪೂಜ್ಯ ಮುನಿಶ್ರೀಯವರು **"ಜಿನನಾಮ ಸ್ತುತಿಸುವುದೆಂದರೆ ಕರ್ಮಕ್ಷಯ ಮಾಡಿದಂತಾಗುವುದು"** ಎಂದು ಹೇಳಿ ಸರ್ವರನ್ನು ಹರಸಿದರು.

ಪರಮಪೂಜ್ಯ ಸ್ವಸ್ತಿಶ್ರೀಗಳವರು **"ಆತ್ಮೋನ್ನತಿಯ ನೈಜ ಸನ್ಮಾರ್ಗವು ಜಿನಸಹಸ್ರನಾಮ ಅರ್ಚನೆಯ ಮೂಲಕ ಧರ್ಮಲಾಭ ದೊರಕುವುದು"** ಎಂದು ಜೈನಾಚಾರ್ಯರ ಉಲ್ಲೇಖ ಮಾಡಿದರು.

2ನೇ ಪುಟಕ್ಕೆ

## ಪ್ರೊ. ಶಾಂತಿನಾಥ ದಿಬ್ಬದ ಇವರಿಗೆ "ಸಿದ್ಧಾಂತ ಕೀರ್ತಿ" ಪ್ರಶಸ್ತಿ



**ಹೊಂಬುಜ :** ಜೈನ ಮಠದ ವತಿಯಿಂದ ನೀಡುವ 2026ನೇ ಸಾಲಿನ 'ಸಿದ್ಧಾಂತಕೀರ್ತಿ' ಪ್ರಶಸ್ತಿಯನ್ನು ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ವಿಶ್ರಾಂತ ಕುಲಸಚಿವರಾದ ಪ್ರೊ. ಶಾಂತಿನಾಥ ದಿಬ್ಬದ ಇವರಿಗೆ ನೀಡಲಾಗುವುದೆಂದು ಪರಮಪೂಜ್ಯ ಶ್ರೀಗಳು ಘೋಷಿಸಿರುತ್ತಾರೆ. ಈ ಪ್ರಶಸ್ತಿಯನ್ನು ವಾರ್ಷಿಕ ಮಹಾರಥಯಾತ್ರಾ ಮಹೋತ್ಸವದ ಮುನ್ನಾ ದಿನವಾದ 11-03-2026ನೇ ಬುಧವಾರದಂದು ನಡೆಯುವ ಧಾರ್ಮಿಕ ಸಭೆಯಲ್ಲಿ ನೀಡಲಾಗುವುದು.

ಹೊಂಬುಜ ಜೈನ ಮಠದಿಂದ ನೀಡುವ ಸಿದ್ಧಾಂತಕೀರ್ತಿ ಪ್ರಶಸ್ತಿಯು ರೂ. 50,000 ಗಳ ನಗದು ಮತ್ತು ಅಂಗವಸ್ತ್ರ ಸಹಿತ ನೀಡಿ ಗೌರವಿಸಲಾಗುವುದು. ಇದುವರೆಗೂ ಅನೇಕ ವಿದ್ವಾಂಸರಿಗೆ ಈ ಪ್ರಶಸ್ತಿಯನ್ನು ಸುಮಾರು 5 ದಶಕಗಳಿಂದ ಶ್ರೀಮಠದಿಂದ ನೀಡಲಾಗುತ್ತಿದೆ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಸ್ವಾಮೀಜಿಯವರು ತಿಳಿಸಿದ್ದಾರೆ.

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನ ಮಠ, ಹುಂಚ

## ಶ್ರೀಕ್ಷೇತ್ರ ಹೊಂಬುಜದಲ್ಲಿ 'ಶ್ರೀ ಜಿನಸಹಸ್ರಾಷ್ಟನಾಮಾರ್ಚನೆ'

1ನೇ ಪುಟದಿಂದ



ಪದ್ಮರಾಜ ಇಂದ್ರ, ಸಹಪುರೋಹಿತರು ಪೂಜಾ ವಿಧಿಗಳನ್ನು ವಿಧಿವತ್ತಾಗಿ ನೆರವೇರಿಸಿದರು. ಸುಶ್ರಾವ್ಯವಾಗಿ ಜಿನನಾಮಸ್ತುತಿಯಿಂದ ಭಕ್ತವೃಂದದವರು ಧನ್ಯರಾದರು.

ಹೊಂಬುಜದ ಶ್ರಾವಕ-ಶ್ರಾವಿಕೆಯರು, ಶ್ರೀ ಪದ್ಮಾವತಿ ಮಹಿಳಾ ಮಂಡಲ, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು, ಶಿವಮೊಗ್ಗ, ಸಾಗರ ಸುತ್ತಮುತ್ತಲಿನ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಶ್ರಾವಕ-ಶ್ರಾವಕಿಯರು ಪಾಲ್ಗೊಂಡಿದ್ದರು.

ವಿಶ್ವ ಸೇವಾ ಯುವ ಸಮಿತಿ ಬೆಂಗಳೂರು ಇವರ ಹಾಗೂ ವಿವಿಧ ಜೈನ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜನೆಗೊಂಡ ಕಾರ್ಯಕ್ರಮದಲ್ಲಿ 1.11 ಕೋಟಿ ಜಿನನಾಮಸ್ಮರಣೆ ಏಕಕಾಲದಲ್ಲಿ ಮಾಡುವ ಮೂಲಕ ವಿಶ್ವ ದಾಖಲೆಗೆ ಸೇರ್ಪಡೆಯಾಯಿತು.

## ಮಂಗಳ ಕಲಶ ಮರುಸ್ಥಾಪನೆ



WWW.HOMBUJAPADMAVATI.ORG

**ಮಂಗಳೂರು :** ಮಹಾನಗರ ಪ್ರವೇಶಿಸುವ ಪಂಪ್‌ವೆಲ್ ಎಂಬಲ್ಲಿ 'ಮಹಾವೀರ ವೃತ್ತ' ನಿರ್ಮಿಸಿ, ಶೋಭಾಯಮಾನ ಆಕರ್ಷಕ ಮಂಗಳ ಕಲಶವನ್ನು ಸ್ಥಾಪಿಸಲಾಗಿತ್ತು. ರಸ್ತೆ ಮೇಲ್ ಸೇತುವೆ ನಿರ್ಮಾಣಕ್ಕಾಗಿ ಮಂಗಳಕಲಶವನ್ನು ತಾತ್ಕಾಲಿಕವಾಗಿ ತೆರವುಗೊಳಿಸಲಾಗಿತ್ತು. ಮಂಗಳೂರು ಜೈನ್ ಸೊಸೈಟಿ, ಮಹಾನಗರ ಪಾಲಿಕೆ, ಜಿಲ್ಲಾಡಳಿತದ ಸಹಯೋಗದಲ್ಲಿ ಜನವರಿ 24, 2026ರಂದು ನವೀಕೃತ ಮಹಾವೀರ ವೃತ್ತವನ್ನು ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಲೋಕಾರ್ಪಣೆ ಮಾಡಿದರು.

## ಶ್ರೀಕ್ಷೇತ್ರ ವರಂಗದಲ್ಲಿ ಜಾತ್ರಾ ಮಹೋತ್ಸವ

### ವರಂಗ ಪುಣ್ಯ ತೀರ್ಥಕ್ಷೇತ್ರ : ಭಕ್ತರಿಗೆ ಅಭಯ ಪ್ರಸಾದ

**ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ**




**ವರಂಗ (ಕಾರ್ಕಳ):** **"ಜೈನಧರ್ಮ ಪರಂಪರೆಯ ವರಂಗ, ಪುಣ್ಯ ತೀರ್ಥಕ್ಷೇತ್ರವಾಗಿದೆ. ಮುನಿವರ್ಯರು, ಆರ್ಯಿಕೆಯರು, ಭಟ್ಟಾರಕ ಮಹಾಸ್ವಾಮೀಜಿಗಳವರಿಗೆ ಧರ್ಮ ಪ್ರಭಾವನೆ ನೀಡಿದ ಸಿದ್ಧಕ್ಷೇತ್ರವಾಗಿದೆ"** ಎಂದು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ವಾರ್ಷಿಕ ರಥೋತ್ಸವ ಸುಸಂದರ್ಭದಲ್ಲಿ ಭಕ್ತವೃಂದದವರಿಗೆ ಆಶೀರ್ವಚನ ಪ್ರವಚನ ದಯಪಾಲಿಸುತ್ತಾ ತಿಳಿಸಿದರು.

ಸ್ವಸ್ತಿಶ್ರೀಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ರಥೋತ್ಸವ ಸಂದರ್ಭದಲ್ಲಿ ಪೂರ್ವಪರಂಪರೆಯ ನೆಲೆಗಟ್ಟಿನಲ್ಲಿ ವರಂಗ ಶ್ರೀಕ್ಷೇತ್ರದಲ್ಲಿ ಜಿನಾಗಮೋಕ್ತ ಶಾಸ್ತ್ರದನ್ವಯ ಪೂಜಾ ವಿಧಿ-ವಿಧಾನದಲ್ಲಿ ನೆರವೇರಿಸಲಾಗುತ್ತಿದೆ. ದೀಕ್ಷಾ ಗುರುಗಳಾದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಜನ್ಮಭೂಮಿಯಾಗಿ ಜೈನಧರ್ಮ ತತ್ತ್ವಗಳನ್ನು ವಿಶ್ವಮಾನ್ಯಗೊಳಿಸಿದುದು ವರಂಗ ಮಣ್ಣಿನ ಧರ್ಮ ಪ್ರಭಾವನೆಯಾಗಿದೆ ಎಂದು ಸ್ಮರಿಸುತ್ತಾ ವರಂಗ ಶ್ರೀ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳು ಭಕ್ತವೃಂದದವರಿಗೆ ಸೌಲಭ್ಯ ಕಲ್ಪಿಸಲಿದೆ. ಸರ್ವರೂ ಶಾಂತಿ-ನೆಮ್ಮದಿಯ ಆರೋಗ್ಯದಾಯಕ ಜೀವನ ನಿರ್ವಹಿಸಲು ಶ್ರೀ ನೇಮಿನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ, ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಕ್ಷೇತ್ರಪಾಲ ಸದಾ ಹರಸಲೆಂದು ಅನುಗ್ರಹ ಪ್ರವಚನದಲ್ಲಿ ಸ್ವಸ್ತಿಶ್ರೀಗಳವರು ತಿಳಿಸಿದರು.

ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಊರ-ಪರವೂರ ಭಕ್ತರು ಪೂಜೆ ಸಮರ್ಪಿಸಿ ಧನ್ಯತಾಭಾವ ತಳೆದರು.

ಫೆ. 3 ರಂದು ನಿತ್ಯವಿಧಿ, ಇಂದ್ರಪ್ರತಿಷ್ಠೆ, ಧ್ವಜಾರೋಹಣ, ಅಂಕುರಾರ್ಪಣೆ, ನವಕಲಶಾಭಿಷೇಕ, ಫೆ. 4ರಂದು ವಾಸ್ತುಶಾಂತಿ, ಶ್ರೀ ಬಲಿ ಉತ್ಸವ, ಫೆ. 5 ರಂದು ನವಗ್ರಹ ಶಾಂತಿ, ಯಂತ್ರಾರಾಧನೆ, ಜಲಾಗ್ನಿಹೋಮ ಮತ್ತು ರಾತ್ರಿ ಪುಷ್ಪರಥೋತ್ಸವ, ಫೆ. 6 ರಂದು ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರಿಗೆ ಮಹಾನೈವೇದ್ಯ ಪೂಜೆ, ಪ್ರಸಾಧ ಬೇಡಿಕೆ, ಹಸ್ತಾ ನಕ್ಷತ್ರದಲ್ಲಿ ಮಹಾರಥೋತ್ಸವ, ಸಂಜೆ ಧರ್ಮೋಪದೇಶ, ಶ್ರೀವಿಹಾರ, ಫೆ. 7 ರಂದು ಶ್ರೀಕ್ಷೇತ್ರಪಾಲ ಪೂಜೆ, ಕುಂಕುಮೋತ್ಸವ, ಧ್ವಜಾವರೋಹಣ ವಿಧಿವತ್ತಾಗಿ ನೆರವೇರಿತು.



**ಜಿನ-ದನಿ**

**ಜೋ ದೇಹೆ ಣಿರವೇಕ್ಖೋ ಣಿಮಮೋ ಣಿರಾರಂಭೋ ।**
**ಆದಾ ಸಹಾವೇ ಸುರಓ ಜೋ ಇ ಸೋ ಲಹಇ ಣಿವ್ವಾಣಂ ॥**

ಅರ್ಥ:-ಯಾರು ಶರೀರದ ಬಗ್ಗೆ ನಿರಪೇಕ್ಷರು, ದ್ವಂದ್ವ ರಹಿತರು, ಮಮತೆ ರಹಿತರು, ಆರಂಭ ರಹಿತರು ಹಾಗೂ ಆತ್ಮಸ್ವಭಾವದಲ್ಲಿ ಸಂಲಗ್ನರೂ ಇಂತಹ ಯೋಗಿಯೂ ನಿರ್ವಾಣ ಹೊಂದುತ್ತಾರೆ. ಆದರೆ ದ್ವಂದ್ವಯುಕ್ತ ಸಾಧಕ ಆತ್ಮಜ್ಞಾನ ಶೂನ್ಯರೆಂದು ಭಾವವು.

## ಬರಲಿರುವ ಪರ್ವದಿನಗಳು

**ವಿಶ್ವಾವಸುನಾಮ ಸಂವತ್ಸರದ**

**ಫಾಲ್ಗುಣ ಮಾಸ ಶುಕ್ಲ ಪಕ್ಷ ಪ್ರತಿಪದದಿಂದ ಕೃಷ್ಣಪಕ್ಷ ತ್ರಯೋದಶಿಯವರೆಗೆ**

**ಫಾಲ್ಗುಣ ಮಾಸ**

ಫೆ. 18 ಬುಧ-ಪ್ರತಿಪದ-ಶತಭಿಷಾ
ಫೆ. 19 ಗುರು-ಬಿದಿಗೆ-ಪೂ.ಭಾದ್ರ
ಫೆ. 20 ಶುಕ್ರ-ತದಿಗೆ-ಉ.ಭಾದ್ರ
ಫೆ. 21 ಶನಿ-ಚತುರ್ಥಿ-ರೇವತಿ
ಫೆ. 22 ಭಾನು-ಪಂಚಮಿ-ಅಶ್ವಿನಿ
ಫೆ. 23 ಸೋಮ-ಷಷ್ಠಿ-ಭರಣಿ
ಫೆ. 24 ಮಂಗಳ-ಸಪ್ತಮಿ-ಅಷ್ಟಮಿ
ಫೆ. 25 ಬುಧ-ನವಮಿ-ರೋಹಿಣಿ
ಫೆ. 26 ಗುರು-ದಶಮಿ-ಮೃಗಶಿರಾ
ಫೆ. 27 ಶುಕ್ರ-ಏಕಾದಶಿ-ಆರಿದ್ರಾ
ಫೆ. 28 ಶನಿ-ದ್ವಾದಶಿ-ಪುನರ್ವಸು
ಮಾ. 1 ಭಾನು-ತ್ರಯೋದಶಿ-ಪುಷ್ಯ
ಮಾ. 2 ಸೋಮ-ಚತುರ್ದಶಿ-ಆಶ್ಲೇಷಾ
ಮಾ. 3 ಮಂಗಳ-ಹುಣ್ಣಿಮೆ-ಮಘಾ
ಮಾ. 4 ಬುಧ-ಪ್ರತಿಪದ-ಪೂರ್ವಾ
ಮಾ. 5 ಗುರು-ಬಿದಿಗೆ-ಉತ್ತರ
ಮಾ. 6 ಶುಕ್ರ-ತದಿಗೆ-ಹಸ್ತಾ
ಮಾ. 7 ಶನಿ-ಚತುರ್ಥಿ-ಚಿತ್ತಾ
ಮಾ. 8 ಭಾನು-ಪಂಚಮಿ-ಸ್ವಾತಿ
**ಮಾ. 9 ಸೋಮ-ಷಷ್ಠಿ-ವಿಶಾಖ, ಶ್ರೀಕ್ಷೇತ್ರ ಹೊಂಬುಜದಲ್ಲಿ ಧ್ವಜಾರೋಹಣ, ನಾಗವಾಹನೋತ್ಸವ**
**ಮಾ.10 ಮಂಗಳ-ಸಪ್ತಮಿ-ಅನುರಾಧ, ಶ್ರೀಕ್ಷೇತ್ರ ಹೊಂಬುಜದಲ್ಲಿ ಸಿಂಹವಾಹನೋತ್ಸವ**
**ಮಾ.11 ಬುಧ-ಅಷ್ಟಮಿ-ಜೇಷ್ಠಾ, ಶ್ರೀಕ್ಷೇತ್ರ ಹೊಂಬುಜದಲ್ಲಿ ಬೆಳ್ಳಿ ಹಾಗೂ ಪುಷ್ಪರಥೋತ್ಸವ**
**ಮಾ.12 ಗುರು-ನವಮಿ-ಮೂಲಾ, ಶ್ರೀಕ್ಷೇತ್ರ ಹೊಂಬುಜದಲ್ಲಿ ಮಹಾರಥೋತ್ಸವ**
**ಮಾ.13 ಶುಕ್ರ-ನವಮಿ-ಪೂ.ಷಾಢ, ಶ್ರೀಕ್ಷೇತ್ರ ಹೊಂಬುಜದಲ್ಲಿ ಮಹಾಭಿಷೇಕ, ಪಾದಪೂಜೆ**
**ಮಾ.14 ಶನಿ-ದಶಮಿ-ಉ.ಷಾಢ, ಶ್ರೀಕ್ಷೇತ್ರ ಹೊಂಬುಜದಲ್ಲಿ ಕುಂಕುಮೋತ್ಸವ, ಧ್ವಜಾವರೋಹಣ**
ಮಾ.15 ಭಾನು-ಏಕಾದಶಿ-ಶ್ರವಣ
ಮಾ.16 ಸೋಮ-ದ್ವಾದಶಿ-ಶ್ರವಣ
ಮಾ.17 ಮಂಗಳ-ತ್ರಯೋದಶಿ-ಧನಿಷ್ಠ



6ನೇ ವಾರ್ಷಿಕ ಪೂಜಾ ಹಾಗೂ ಮಹಾಮಸ್ತಕಾಭಿಷೇಕ ಮಹೋತ್ಸವ

# "ಬಾಹುಬಲಿ ತತ್ವ ಸಿದ್ಧಾಂತಗಳು ಅಗತ್ಯ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಚಳ್ಳಕೆರೆ:** **'ಭರತ ಖಂಡದಲ್ಲಿ ಶಾಂತಿ, ಅಹಿಂಸೆ, ಸಂಸ್ಕೃತಿ, ಸಂಸ್ಕಾರ, ಪರಂಪರೆಗಳ ಉಳಿವಿಗೆ ಭಗವಾನ್ ಬಾಹುಬಲಿ ತತ್ವ ಸಿದ್ಧಾಂತಗಳು ಸಮಾಜಕ್ಕೆ ಅತಿ ಅಗತ್ಯವಾಗಿದೆ'** ಎಂದು ಶ್ರೀಕ್ಷೇತ್ರ ಹೊಂಬುಜ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು ತಿಳಿಸಿದರು.

ಅವರು ಪಟ್ಟಣದ ಶ್ರೀ ಪಾರ್ಶ್ವನಾಥ ಜಿನಮಂದಿರ ಹಾಗೂ ಭಗವಾನ್ ಬಾಹುಬಲಿ ಸಮಾಜದ ವತಿಯಿಂದ ಶ್ರೀ ಮೈತ್ರಿಧಾಮ ಬಾಹುಬಲಿ ಮಹಾಸ್ವಾಮಿಯ 6ನೇ ವಾರ್ಷಿಕ ಪೂಜಾ ಹಾಗೂ ಮಹಾಮಸ್ತಕಾಭಿಷೇಕ ಮಹೋತ್ಸವದಲ್ಲಿ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭಗವಾನ್ ಬಾಹುಬಲಿಯ ಚರಿತ್ರೆ ಹಾಗೂ ಪ್ರಾರಂಭಿಕ ಮನುಕುಲದ ಜೀವನಶೈಲಿಯನ್ನು ಕಲ್ಪವೃಕ್ಷಗಳು ನಶಿಸಿಹೋಗುವ ಮುನ್ಸೂಚನೆಯನ್ನು ಮನಗೊಂಡ ಆದಿನಾಥ ತೀರ್ಥಂಕರ ಜನರಿಗೆ ಬದುಕುವ ದಾರಿ ಹಸಿ ಮಸಿ ಕೃಷಿ ವಾಣಿಜ್ಯ ಹೀಗೆ ಹಲವಾರು ವಿದ್ಯೆಗಳನ್ನು ತಮ್ಮ ಮಕ್ಕಳ ಭರತ ಆದಿಯಾಗಿ ಬಾಹುಬಲಿ ಹಾಗೂ ಇಬ್ಬರು ತಂಗಿಯರು ಕಲಿತಂತಹ ವಿದ್ಯೆಗಳನ್ನು ಮನಮುಟ್ಟುವಂತೆ ನಮ್ಮೆಲ್ಲರಿಗೂ ತಿಳಿಸಿಕೊಟ್ಟಿದ್ದಾರೆ.

ಜೈನರಾಗಿ ನಾವು ಮಾಡಬೇಕಾದ ಷಡ್ಕ್ರಿಯೆ ಹಾಗೂ ಪಂಚ ಅಣು ವ್ರತಗಳ ಮಹತ್ವ ಜೈನ ಸಂಸ್ಕೃತಿಯ ಹಾಗೂ ನಮ್ಮ ಶ್ರಾವಕ ಶ್ರಾವಕಿಯರಲ್ಲಿ ಇರಬೇಕಾದ ಶ್ರದ್ಧೆ ಭಕ್ತಿ ಹಾಗೂ ಆತ್ಮನಿಂದ ಪರಮಾತ್ಮನವರೆಗೆ ಕಲಿಯಬೇಕಾದಂತಹ ಸಂಸ್ಕಾರಗಳನ್ನು ತಿಳಿಸುತ್ತಾ ಚಳ್ಳಕೆರೆಯ ಶ್ರಾವಕ ಶ್ರಾವಕಿಯರಿಗೆ ಆಶೀರ್ವಚನವನ್ನು ನೀಡಿದರು.

**'ಭಗವಾನ್ ಬಾಹುಬಲಿ ಮತ್ತು ಭರತ ಸಹೋದರರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜದ ಒಳಿತಿಗೆ ಶ್ರಮಿಸಿದರು. ಸಮಾಜ ಬಂದುಗಳು ಶುದ್ಧ ಮನಸ್ಸಿನಿಂದ ಭರತ-ಬಾಹುಬಲಿಯಂತೆ ಸಮಾಜದ ಒಳಿತಿಗೆ ಮಾದರಿಯಾಗಬೇಕು'** ಎಂದರು.

WWW.HOMBUJAPADMAVATI.ORG

ಭಗವಾನ್ ಬಾಹುಬಲಿ ದಿಗಂಬರ ಜೈನ್‌ಟ್ರಸ್ಟ್ ಅಧ್ಯಕ್ಷರು ಸಮಾರಂಭದ ಅಧ್ಯಕ್ಷತೆ ವಹಿಸಿದರು. ಚಳ್ಳಕೆರೆ ಜಿನವಾಣಿ ಮಹಿಳಾ ಸಂಘ, ಶ್ವೇತಾಂಬರ ಜೈನ ಸಮಾಜ, ವಧು ಮಂಡಲ್ ಸೇರಿದಂತೆ ಚಳ್ಳಕೆರೆ, ಚಿತ್ರದುರ್ಗ, ರಂಗಸಮುದ್ರ, ಹೊಸದುರ್ಗ, ಹೊಳಲ್ಕೆರೆ, ಅಮರಾಪುರ ಜೈನ ಬಂಧುಗಳು ಸೇರಿದಂತೆ ಶ್ರಾವಕ ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬೆಳಗ್ಗೆ ಧ್ವಜಾರೋಹಣ, 1008 ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿಗೆ ಮತ್ತು ಭಗವಾನ ಶ್ರೀ ಅನಂತನಾಥ ಸ್ವಾಮಿಗೆ ಅಭಿಷೇಕ, ಶ್ರೀ ಶಿಖರ್ಜಿ ಆರಾಧನೆ ಇನ್ನಿತರ ಕಾರ್ಯಕ್ರಮಗಳು ಜರುಗಿದವು. ಪುರೋಹಿತರಾದ ದಿವ್ಯ ಪಂಡಿತ್ ಹಾಗು ಪ್ರದೀಪ್ ಕುಮಾರ್ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು.

## ಗ್ರಂಥಗಳ ಹಸ್ತಾಂತರ



ಬೆಂಗಳೂರು : ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟಿನ ಅತ್ಯಮೂಲ್ಯ, ಅತ್ಯಂತ ಪ್ರಾಚೀನ, ಪರಮಪವಿತ್ರ ಹಾಗೂ ಪುಣ್ಯದಾಯಕ ಸಿದ್ಧಾಂತಗ್ರಂಥಗಳು, ಹರಿವಂಶ, ಭರತೇಶ ವೈಭವ, ಸಮಯಸಾರ, ಪ್ರತಿಷ್ಠಾತಿಲಕ, ಮಹಾಪುರಾಣ ಇತ್ಯಾದಿ ಸೇರಿದಂತೆ 14 ತಾಳೆಗರಿ ಗ್ರಂಥಗಳ ಸಂಪತ್ತನ್ನು ಶ್ರವಣಬೆಳಗೊಳದ ಪರಮಪೂಜ್ಯ ಶ್ರೀಗಳವರ ಮುಖಾಂತರ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗಕ್ಕೆ ಟ್ರಸ್ಟಿನ ಅಧ್ಯಕ್ಷರು ಮತ್ತು ಧರ್ಮದರ್ಶಿ ಶ್ರೀ ಎ.ಸಿ. ವಿದ್ಯಾಧರ್ ಅವರು 03-02-2026ರ ಮಂಗಳವಾರದಂದು ಕೆ.ಜೆ.ಎ. ಪದಾಧಿಕಾರಿಗಳೊಡನೆ ಹಸ್ತಾಂತರಿಸ ಲಾಯಿತು. ಈ ಸಂದರ್ಭದಲ್ಲಿ ಈ ಹಿಂದೆ ದಿನಾಂಕ 04-01-2004ರಂದು ಶ್ರೀಕ್ಷೇತ್ರದ ಶ್ರೀಗಳವರಿಗೆ ಹಸ್ತಾಂತರಿಸಿದ್ದ ನಯಸೇನನ ಧರ್ಮಾಮೃತ, ಸಿದ್ಧಾಂತಸಾರ, ನೇಮಿಜಿನೇಶ ಸಂಗತಿ, ಪ್ರತಿಷ್ಠಾತಿಲಕ, ಮಹಾಪುರಾಣ, ಭರತೇಶ ವೈಭವ, ಭರ್ತೃಹರಿಯ ನೀತಿಗ್ರಂಥ ಇತ್ಯಾದಿ 20 ಗ್ರಂಥಗಳನ್ನು ಹಸ್ತಾಂತರಿಸಿದ್ದನ್ನು ಸ್ಮರಿಸಲಾಯಿತು.


# ಕಾರ್ಕಳ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ-2027 ಪೂರ್ವಭಾವಿ ಸಮಾಲೋಚನಾ ಸಭೆ



**ಕಾರ್ಕಳ:** ಇಲ್ಲಿಯ ಗೊಮ್ಮಟೇಶ್ವರ ಶ್ರೀ ಬಾಹುಬಲಿ ಸ್ವಾಮಿ ಮಹಾ ಮಸ್ತಕಾಭಿಷೇಕವು 2027ರ ಫೆಬ್ರವರಿ ತಿಂಗಳಲ್ಲಿ ಜರುಗಲಿದ್ದು, ಜೈನ ಧರ್ಮಿಯ ಶ್ರಾವಕ-ಶ್ರಾವಿಕೆಯರ ಸಮಾಲೋಚನ ಸಭೆಯನ್ನು ಜನವರಿ 26 ರಂದು ಶ್ರೀ ಬಾಹುಬಲಿ ಪ್ರವಚನ ಮಂದಿರದಲ್ಲಿ ಏರ್ಪಡಿಸಲಾಗಿತ್ತು. ಡಾ. ಎಂ.ಎನ್. ರಾಜೇಂದ್ರ ಕುಮಾರ್, ಡಾ. ಜೀವಂಧರ ಬಲ್ಲಾಳ, ಪಡುಬಿದ್ರೆ ರತ್ನಾಕರ ರಾಜ್, ಅಭಯಚಂದ್ರ ಜೈನ್, ಪುಷ್ಪರಾಜ್ ಜೈನ್ ಮುಂತಾದವರು ಉಪಸ್ಥಿತರಿದ್ದು, ಉಡುಪಿ, ಮಂಗಳೂರು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಶ್ರಾವಕ-ಶ್ರಾವಕಿಯರು ಪಾಲ್ಗೊಂಡಿದ್ದರು. ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸುವುದಕ್ಕೆ ಅವಕಾಶವಿದ್ದು, ಹೆಸರುಗಳನ್ನು ನೋಂದಾಯಿಸಿದರು. ಈಗಾಗಲೇ ಕರ್ನಾಟಕ ಮುಖ್ಯಮಂತ್ರಿಯವರಿಗೆ 70 ಕೋಟಿ ರೂ. ಅಭಿವೃದ್ಧಿ ಯೋಜನೆಗೆ ಅನುದಾನ ನೀಡಲು ಮನವಿ ಸಲ್ಲಿಸಲಾಗಿದೆ.

## ಜೈನಧರ್ಮ ತತ್ವಬೋಧನೆಗಳು ಸರ್ವತ್ರ ಪಸರಿಸಲಿ

-ಶ್ರವಣಬೆಳಗೊಳ ಶ್ರೀಗಳವರು




ವಿಟ್ಲ : ಜೈನಧರ್ಮವು ಅನಾದಿಯಾಗಿದ್ದು, ತತ್ವ-ಸಿದ್ಧಾಂತಗಳು ವಿಶ್ವದಲ್ಲಿ ಸ್ವೀಕರಿಸಲ್ಪಟ್ಟಿವೆ. ಪ್ರಾಚೀನ ಜಿನಮಂದಿರಗಳು ಅಪೂರ್ವ ಶಿಲ್ಪಕಲೆ-ವಾಸ್ತು ವಿಶಿಷ್ಟತೆ ಹೊಂದಿದೆ ಎಂದು ಶ್ರವಣಬೆಳಗೊಳ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವಿವರಿಸಿದರು. ವಿಟ್ಲ ಶ್ರೀ ಚಂದ್ರನಾಥ ತೀರ್ಥಂಕರ ಜಿನಮಂದಿರದ ಪಂಚಕಲ್ಯಾಣದ ಬಳಿಕ ಪ್ರಥಮ ವಾರ್ಷಿಕೋತ್ಸವದಲ್ಲಿ ಅನುಗ್ರಹ ಪ್ರವಚನ ಮಾಡುತ್ತಾ, ಜೈನ ಧರ್ಮದ ಪೂಜಾ ವಿಧಿ-ವಿಧಾನ, ಮಂತ್ರಗಳು ಸರ್ವ ಧರ್ಮೀಯರಿಗೂ ಪರಿಚಯವಾಗಬೇಕು. ಜೈನ ಧರ್ಮೀಯರಿಗೆ ಸೀಮಿತವಾಗಿರದೇ ಸರ್ವತ್ರ ಪಸರಿಸಲು ಸಾಧ್ಯವಾದಾಗ ಜೈನಧರ್ಮ ಪರಂಪರೆ ಬೆಳೆಯುತ್ತದೆ ಎಂದರು. ವಿಟ್ಲ ಜಿನಮಂದಿರ ನಿರ್ಮಾಣ, ವಾಸ್ತು ವೈವಿಧ್ಯತೆ, ಕಲಾತ್ಮಕ ಸ್ಪರ್ಶವು ದೇಶದೆಲ್ಲೆಡೆ ಪ್ರಸಿದ್ಧಿ ಪಡೆಯಲೆಂದು ಆಶಿಸಿದರು.

ಮೂಡುಬಿದಿರೆ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ನಿರಂತರ ಆರಾಧನೆಗಳು ನೆರವೇರಲೆಂದು ಆಶೀರ್ವಜನ ನೀಡಿದರು. ಜಿನಮಂದಿರದ ಅನುವಂಶೀಯ ಮೋಕ್ತೇಸರರಾದ ಡಿ. ವಿನಯಕುಮಾರ, ಜಿತೇಶ್, ರತ್ನಾಕರ ಜೈನ್, ಡಾ. ಅರಳ ರಾಜೇಂದ್ರ ಶೆಟ್ಟಿ, ಭರತ್ ಬಲ್ಲಾಳ್ ಮುಂತಾದವರು ಉಪಸ್ಥಿತರಿದ್ದರು.



## ಡಾ. ದಂಡಾವತಿ ಅವರ 'ಜೈನಧರ್ಮ' ಕೃತಿಗೆ ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಪ್ರಶಸ್ತಿಯ ಗರಿ

**ಬೆಂಗಳೂರು:** ಹಿರಿಯ ಪತ್ರಕರ್ತ ಮತ್ತು ಲೇಖಕ ಡಾ. ಪದ್ಮರಾಜ ದಂಡಾವತಿ ಅವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ 'ಜೈನ ಧರ್ಮ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ ಪ್ರಶಸ್ತಿ ಘೋಷಣೆಯಾಗಿದೆ. ಪ್ರೊ. ಕೆ. ಮರುಳಸಿದ್ದಪ್ಪ ನೇತೃತ್ವದ ಆಯ್ಕೆ ಸಮಿತಿ ಈ ಆಯ್ಕೆ ಮಾಡಿ, ಪ್ರಶಸ್ತಿ ಪ್ರಧಾನ ಮಾಡಿದೆ.




ಪ್ರಶಸ್ತಿಯು ರೂ. 6,000 ನಗದು, ಫಲಕ, ಶಾಲು, ಫಲ ಒಳಗೊಂಡಿದೆ. ಪ್ರಕಟವಾದ ಕೇವಲ 3 ತಿಂಗಳಲ್ಲಿ ಈ ಕೃತಿ ಎರಡನೇ ಮುದ್ರಣ ಕಂಡಿದೆ. ಮೂಲದಲ್ಲಿ ದೇವದತ್ತ ಪಟ್ಟನಾಯಕ ಅವರು ಈ ಕೃತಿಯನ್ನು ರಚಿಸಿದ್ದಾರೆ.

॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥

# ಅತಿಶಯ ಶ್ರೀಕ್ಷೇತ್ರ ಹೊಂಬುಜ

॥ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ನಮಃ ॥





## ಶ್ರೀಮುಖ ಪತ್ರಿಕೆ





ಸ್ವಸ್ತಿಶ್ರೀ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯವರ್ಯ,
ಮಹಾವಾದವಾದೀಶ್ವರರಾಯ ವಾದಿಪಿತಾಮಹ,
ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕಾನ್ವರ್ಥ ಬಿರುದಾವಳಿ ವಿರಾಜಮಾನರುಂ,
ಶ್ರೀ ಮತ್ಕುಂದಕುಂದಾನ್ವಯ, ಸರಸ್ವತೀಗಚ್ಛ,
ಶ್ರೀ ಪದ್ಮಾವತೀದೇವೀ ಲಬ್ಧವರ ಪ್ರಸನ್ನರುಂ,
ಉತ್ತರ ಮಧುರಾಧೀಶ್ವರ ಜಿನದತ್ತರಾಯ ಜೀವರಕ್ಷಾ ಪಾಲಕರುಂ,
ಕಲಿಕುಂಡ ಯಂತ್ರಾರಾಧಕರುಂ, ಸುವರ್ಣಕಲಶ ಪ್ರತಿಷ್ಠಾಪನಾಚಾರ್ಯರುಂ,
ಶ್ರೀ ಜಿನಮತಕಮಲವನ ಹಂಸಾಯಮಾನರುಂ, ಶ್ರೀ ಮನ್ನಿಜಘಟಿಕ ಸ್ಥಾನ ಡಿಳ್ಳಿ,
ಮಲಯಾದ್ರಿ, ವಿಜಯನಗರ, ವರಂಗ, ಪಟ್ಟಪೊಂಬುಚ್ಚ ಚತುಃಸ್ಸಿದ್ಧ ಸಿಂಹಾಸನಾಧೀಶ್ವರರುಂ,
ಶ್ರೀಮತ್ ಸಿದ್ಧಾಂತಕೀರ್ತಿ ಭಟ್ಟಾರಕಸ್ವಾಮಿ ಪಟ್ಟಾಂಭೋಜ ದಿವಾಕರರಾಯಮಾನರುಂ,
ಶ್ರೀ ವಿದ್ಯಾನಂದಸ್ವಾಮಿ ಪಟ್ಟಾಂಭೋಜ ದಿವಾಕರರುಂ,

**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು**

**ಕಳುಹಿಸಿರುವ ನಿರೂಪ**

ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಪರಂಪರಾನುಗತವಾಗಿ ನೆರವೇರಿಸಿಕೊಂಡು ಬಂದಿರುವ

## ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರ ಮತ್ತು ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಅಮ್ಮನವರ ವಾರ್ಷಿಕ ರಥಯಾತ್ರಾ ಮಹೋತ್ಸವ

ಶ್ರೀ ವಿಶ್ವಾವಸು ನಾಮ ಸಂವತ್ಸರದ ಫಾಲ್ಗುಣ ಮಾಸ ಕೃಷ್ಣಪಕ್ಷ ಷಷ್ಠಿ ದಿನಾಂಕ 9-03-2026 ರಿಂದ ದಶಮಿ 14-03-2026ರ ವರೆಗೆ ನೆರವೇರಲಿರುವುದು.

(ದಿನಾಂಕ 05-03-2026 ರಿಂದ 08-03-2026ರವರೆಗೆ ಕ್ಷೇತ್ರದ ವಿವಿಧ ಬಸದಿಗಳಲ್ಲಿ ವಿಶೇಷ ಆರಾಧನೆಗಳು ನಡೆಯಲಿವೆ)

| 05-03-2026 ಗುರುವಾರ | 06-03-2026 ಶುಕ್ರವಾರ | 07-03-2026 ಶನಿವಾರ | 08-03-2026 ಭಾನುವಾರ |
|---|---|---|---|
| ಶ್ರೀಮಠದ ಬಸದಿಯಲ್ಲಿ (ಶ್ರೀ ನೇಮಿನಾಥ ಸ್ವಾಮಿ ಬಸದಿ) ಗಣಧರವಲಯ ಆರಾಧನೆ | ಶ್ರೀ ಮಕ್ಕಳ ಬಸದಿಯಲ್ಲಿ (ಶ್ರೀಪಾರ್ಶ್ವನಾಥ ಸ್ವಾಮಿ ಚಿಕ್ಕ ಬಸದಿ) ಕಲ್ಯಾಣ ಮಂದಿರ ಆರಾಧನೆ | ನಗರ ಜಿನಾಲಯದಲ್ಲಿ ಭಕ್ತಾಮರ ಆರಾಧನೆ | ಶ್ರೀ ಬೋಗಾರ ಬಸದಿಯಲ್ಲಿ ಚೌಷಟ್ ಋದ್ಧಿ ವಿಧಾನ |

### 09-03-2026 ಸೋಮವಾರ — ನಾಗವಾಹನೋತ್ಸವ

ರಾತ್ರಿ 8-00ಕ್ಕೆ

ಇಂದ್ರಪ್ರತಿಷ್ಠೆ, ವಿಮಾನಶುದ್ಧಿ, ಯಕ್ಷಪ್ರತಿಷ್ಠೆ, ಧ್ವಜಾರೋಹಣ, ಮಹಾನೈವೇದ್ಯ ಪೂಜೆ, ನಾಂದಿಮಂಗಲ, ವಾಸ್ತುಶಾಂತಿ, ಮೃತ್ತಿಕಾ ಸಂಗ್ರಹ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಶ್ರೀಮತಿ ರಚನಾ ಜೈನ್ ಮತ್ತು ಶ್ರೀ ಸಂಜೀವ ಜೈನ್
ಅಶೋಕ ಕಂಪನಿ, ದೆಹಲಿ.

### 10-03-2026 ಮಂಗಳವಾರ — ಸಿಂಹವಾಹನೋತ್ಸವ

ರಾತ್ರಿ 8-00ಕ್ಕೆ

ನಿತ್ಯವಿಧಿ ಸಹಿತ ಶ್ರೀಸ್ವಾಮಿ ಮತ್ತು ಶ್ರೀಅಮ್ಮನವರ ಸನ್ನಿಧಿಯಲ್ಲಿ ಅಭಿಷೇಕ, ಕಲಿಕುಂಡಯಂತ್ರಾರಾಧನೆ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಮಾತೃಶ್ರೀ ಶ್ರೀಮತಿ ಮೀನಾದೇವಿ ರಾರಾ ಮತ್ತು
ಪುತ್ರ : ಶ್ರೀ ಪವನಕುಮಾರ್ ರಾರಾ ಮತ್ತು ಸಹೋದರರು,
ತಿನ್ಸುಕಿಯಾ (ಅಸ್ಸಾಂ)

WWW.HOMBUJAPADMAVATI.ORG

### 11-03-2026 ಬುಧವಾರ — ಬೆಳ್ಳಿ ರಥೋತ್ಸವ, ಪುಷ್ಪ ರಥೋತ್ಸವ

ರಾತ್ರಿ 8-00ಕ್ಕೆ

ನಿತ್ಯವಿಧಿ ಸಹಿತ ಜಲಾಗ್ನಿ, ಹೋಮ, ಶಾಂತಿಚಕ್ರಾರಾಧನೆ, ಶ್ರೀಬಲಿ.
ಸಂಜೆ 6ಕ್ಕೆ ಧಾರ್ಮಿಕ ಸಭೆ.

**"ಸಿದ್ಧಾಂತಕೀರ್ತಿ" ಪ್ರಶಸ್ತಿ ಪ್ರದಾನ**
ಸಂಜೆ 6-00ಕ್ಕೆ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಶ್ರೀ ಸರೋಜ್, ಶ್ರೀಮತಿ ಸರಿತಾ ಬಗಡಾ, ನವೀನ್ ಬಗಡಾ, ಸೇಲಂ ಮತ್ತು
ಶ್ರೀ ರಾಜೇಂದ್ರ - ಶ್ರೀಮತಿ ಸುಮನ್ ಛಾಬ್ರಾ, ಪ್ರತೀಕ್,
ನಕುಲ್ ಜೈನ್ ಛಾಬ್ರಾ, ಗೌಹಾಟಿ (ಅಸ್ಸಾಂ)

### 12-03-2026 ಗುರುವಾರ — ಮಹಾರಥೋತ್ಸವ

ಮಧ್ಯಾಹ್ನ 1-00 ಗಂಟೆಗೆ

ಮೂಲಾನಕ್ಷತ್ರದಲ್ಲಿ ನಿತ್ಯ ವಿಧಿ ಸಹಿತ ಮಹಾನೈವೇದ್ಯ ಪೂಜೆ,
ಮಧ್ಯಾಹ್ನ ರಥಾರೋಹಣಕ್ಕೆ
ಪ್ರಸಾದ ಬೇಡಿಕೆ - ರಥಾರೋಹಣ

ಭೋಜನ ಸೇವಾಕರ್ತರುಗಳು:
ಶ್ರೀ ವಿಜಯ ಪಾಟ್ನಿ, ಶ್ರೀಮತಿ ಸರಿತಾ ಪಾಟ್ನಿ
ಧನಲಕ್ಷ್ಮೀ ಪರಿವಾರ, ಇಂಫಾಲ (ಮಣಿಪುರ)

### 13-03-2026 ಶುಕ್ರವಾರ — 108 ಕಲಶಗಳ ಮಹಾಭಿಷೇಕ ಮತ್ತು ಸಂಘ ಪೂಜೆ (ಗುಡ್ಡದ ಬಸದಿ)

ಬೆಳಿಗ್ಗೆ 11-00ರಿಂದ

ನಿತ್ಯವಿಧಿ ಸಹಿತ,
ತ್ರಿಕೂಟ ಜಿನಾಲಯದ
(ಗುಡ್ಡದ ಬಸದಿಯ) ಭಗವಾನ್
ಶ್ರೀ ಪಾರ್ಶ್ವನಾಥಸ್ವಾಮಿಗೆ ಮಹಾಭಿಷೇಕ

ಸೇವಾಕರ್ತರುಗಳು :
ಶ್ರೀಮತಿ ರೂಪಲ್ ಜೈನ್ ಮತ್ತು ಶ್ರೀ ರಜನೀಶ್ ಜೈನ್
ಬೆಂಗಳೂರು

### 14-03-2026 ಶನಿವಾರ — ಕುಂಕುಮೋತ್ಸವ, ಧ್ವಜಾವರೋಹಣ

ನಿತ್ಯವಿಧಿ

ಸೇವಾಕರ್ತರುಗಳು :
ಶ್ರೀ ಮನೋಜ್‌ಕುಮಾರ ಪಾಟ್ನಿ, ಶ್ರೀಮತಿ ಸಂಗೀತಾ ಪಾಟ್ನಿ
ಸಂಗೀತಾ ಟೆಕ್ಸ್‌ಟೈಲ್ಸ್, ಇಂಫಾಲ (ಮಣಿಪುರ)

11-03-2026, ಬುಧವಾರ ಪುಷ್ಪರಥೋತ್ಸವದ ಸಂಜೆಯ ಉಪಹಾರದ ಸೇವಾಕರ್ತರು :
ಶ್ರೀಮತಿ ನಾಗರತ್ನಮ್ಮ, ಶ್ರೀ ವಿ.ಪಿ. ಶಾಂತರಾಜ್, ಶ್ರೀಮತಿ ಮೇಘ ಸಿದ್ಧಾರ್ಥ ಮತ್ತು ಮೊಮ್ಮಕ್ಕಳು, ಶಿವಮೊಗ್ಗ
13-03-2026ರ ಶುಕ್ರವಾರ (ಮಹಾಭಿಷೇಕದ ದಿವಸ) ಬೆಳಗಿನ ಉಪಹಾರದ ವ್ಯವಸ್ಥೆಯನ್ನು ಕೊಪ್ಪಳ ಜಿಲ್ಲಾ ಜೈನ ಸಮಾಜದ ವತಿಯಿಂದ ಏರ್ಪಡಿಸಲಾಗಿದೆ.
13-03-2026ನೇ ಶುಕ್ರವಾರ ದಿವಸದ ಅಗ್ರೋಧಕ ಸೇವೆ : ಶ್ರೀ ರವಿರಾಜ್, ಶ್ರೀಮತಿ ಚೂಡಾಮಣಿ ಮತ್ತು ಮಕ್ಕಳು, ಬೆಂಗಳೂರು
ತ್ಯಾಗಿಗಳ ಆಹಾರ ದಾನದ ವ್ಯವಸ್ಥೆ : ಶ್ರೀ ರವಿಕಿರಣ ಬಾಬುಗೊಂಡ ಪಾಟೋರೆ, ಸಾ॥ ಸಾಂಗ್ಲಿ, ಮಹಾರಾಷ್ಟ್ರ ಇವರಿಂದ
ಸರ್ವ ವಾದ್ಯ ಸೇವೆ : ಶ್ರೀಮತಿ ಪದ್ಮಶ್ರೀ, ಶ್ರೀ ಮಹಾವೀರ್ ನೀಲಜಗಿ, ಅಧ್ಯಕ್ಷರು, ಮಹಾವೀರ ಸಮೂಹ ಸಂಸ್ಥೆ, ಹುಕ್ಕೇರಿ
ಪುಷ್ಪಾಲಂಕಾರ ಸೇವೆ : ಶ್ರೀಮತಿ ಜ್ವಾಲಿನಿ, ಶ್ರೀ ಶರತ್‌ಕುಮಾರ್, ಬೆಂಗಳೂರು
ವಿ.ಸೂ. : ಭಕ್ತಾದಿಗಳು ತಮ್ಮ ಕಾಣಿಕೆಯನ್ನು ಎಂ.ಓ/ಬ್ಯಾಂಕ್ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಿಕೊಡಬಹುದು
NEFT/RTGS ಮೂಲಕ ಕಾಣಿಕೆ ಸಂದಾಯಕ್ಕಾಗಿ : Sri Hombuja Jain Math
S.B. A/c No : 3182500101025001 with Karnataka Bank, Humcha Br. IFSC Code : KARB0000318

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನಮಠ
shrihombuja@gmail.com
M : 9483801460

ಶ್ರೀ ಹೊಂಬುಜ ಜೈನಮಠ, ಅಂಚೆ : ಹುಂಚ - 577 436 ಹೊಸನಗರ ತಾ॥, ಶಿವಮೊಗ್ಗ ಜಿಲ್ಲೆ ಫೋನ್ : 08185-262722, 9481453653

KARNATAKA BANK
sri hombuja jain math
SCAN QR CODE TO PAY
BHIM UPI G Pay Paytm amazon pay

ಗುರುದೇವ GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26
ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722